ಗೃಹ ನಿರ್ಮಾಣ ಸಹಕಾರಿ ಸಂಘಗಳಿಗೆ ಸರ್ಕಾರ ಮಂಜೂರು ಮಾಡಿದ ಖರಾಬು ಭೂಮಿ:

1084 (1739) ಶ್ರೀ ಹ್ಯಾರಿಸ್ ಎನ್. ಎ (ಶಾಂತಿನಗರ)

ಅ) ಬೆಂಗಳೂರು ಮಹಾನಗರ ಪ್ರದೇಶದಲ್ಲಿರುವ ಸರ್ಕಾರದ ಖರಾಬು ಭೂಮಿಯು ವಿಸ್ತೀರ್ಣ ಎಷ್ಟಿದೆ (ಪ್ರದೇಶವಾರು ವಿವರ ನೀಡುವುದು).

ಆ) ಸದರಿ ಖರಾಬು ಭೂಮಿಯನ್ನು ಗೃಹನಿರ್ಮಾಣ ಸಂಘಗಳಿಗೆ ಮಂಜೂರು ಮಾಡಿರುವ ಪ್ರಕರಣಗಳ ವಿವರ ನೀಡುವುದು. ಗೃಹ ನಿರ್ಮಾಣ ಸಹಕಾರ ಸಂಘಗಳ ಹೆಸರುಗಳು ಮತ್ತು ಮಂಜೂರು ಮಾಡಿದ ಭೂಮಿಯ ವಿವರ ನೀಡುವುದು.

ಇ) ಈ ವ್ಯಾಪ್ತಿಯಲ್ಲಿರುವ ಖರಾಬು ಭೂಮಿಯ ವಿಸ್ತೀರ್ಣದ ವಿವರ ನೀಡುವುದು.

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಮಾನ್ಯ ಕಂದಾಯ ಸಚಿವರು)

(ಅ)

ಕ್ರ ಸಂ.	ತಾಲ್ಲೂಕು	ವಿವರ
1	ಉತ್ತರ ತಾಲ್ಲೂಕು	31134–20 ಎ/ಗುಂ
2	ಉತ್ತರ (ಅಪೆಪೆ) ತಾಲ್ಲೂಕು	5395–29.08 ಎ/ಗುಂ
3	ದಕ್ಷಿಣ ತಾಲ್ಲೂಕು	16540–00 ಎ/ಗುಂ
4	ಪೂರ್ವ ತಾಲ್ಲೂಕು	4664–34 ಎ/ಗುಂ
5	ಆನೇಕಲ್ ತಾಲ್ಲೂಕು	ಯಾವುದೂ ಇರುವುದಿಲ್ಲ.

(ಆ)

ಕ್ರ. ಸಂ.	ತಾಲ್ಲೂಕು	ವಿವರ
1	ಉತ್ತರ ತಾಲ್ಲೂಕು	ಗೃಹ ನಿರ್ಮಾಣ ಸಂಘಕ್ಕೆ ಜಮೀನು ಮಂಜೂರು ಮಾಡಿಲ್ಲ.
2	ಉತ್ತರ (ಅಪರ) ತಾಲ್ಲೂಕು	1. ಜಕ್ಕೂರು ಪ್ಲಾಂಟೆಷನ್ ಸ.ನಂ.4/ಪಿ1 ರಲ್ಲಿ 2–00 ಎಕರೆ ಜಮೀನನ್ನು ಕರ್ನಾಟಕ ರಾಜ್ಯ ನ್ಯಾಯಾಂಗ ಇಲಾಖೆ ನೌಕರರ ಗೃಹನಿರ್ಮಾಣ ಸಹಕಾರ ಸಂಘ. 2. ಅಳ್ಳಾಸಂದ್ರ ಸ.ನಂ.105/1 ರಲ್ಲಿ 7–14 ಎ/ಗುಂ ವಿಶ್ವವಿದ್ಯಾಯ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ
3	ದಕ್ಷಿಣ ತಾಲ್ಲೂಕು	ಕೆಂಗೇರಿ, ಹೋಬಳಿ, ಕೆಂಚೇನಹಳ್ಳಿ ಗ್ರಾಮದ ಸ.ನಂ. 20 ರಲ್ಲಿ 3–20 ಎ/ಗುಂ ಜಮೀನನ್ನು ಅರಣ್ಯ ನೌಕರರ ಗೃಹನಿರ್ಮಾಣ ಸಂಘಕ್ಕೆ ಮಂಜೂರು ಮಾಡಿದೆ.
4	ಪೂರ್ವ ತಾಲ್ಲೂಕು	ಎನ್‌ಜಿಇಎಫ್ ಗೃಹನಿರ್ಮಾಣ ಸಹಕಾರ ಸಂಘ ನಿಯಮಿತ ರವರಿಗೆ ಭೈರಸಂದ್ರ ಗ್ರಾಮದ ಸ.ನಂ. 144 ರಲ್ಲಿ 0–35ಗುಂಟೆ ಜಮೀನು ಭೂಸ್ವಾಧೀನವಾಗಿರುತ್ತದೆ.
5	ಆನೇಕಲ್ ತಾಲ್ಲೂಕು	ಗೃಹನಿರ್ಮಾಣ ಸಂಘಕ್ಕೆ ಜಮೀನು ಮಂಜೂರು ಮಾಡಿಲ್ಲ

(ಇ)

ಕ್ರ.ಸಂ.	ತಾಲ್ಲೂಕು	ವಿವರ
1	ಉತ್ತರ ತಾಲ್ಲೂಕು	ಅನ್ವಯಿಸುವುದಿಲ್ಲ
2	ಉತ್ತರ (ಅಪರ) ತಾಲ್ಲೂಕು	49–29 ಎ/ಗುಂ
3	ದಕ್ಷಿಣ ತಾಲ್ಲೂಕು	53–22 ಎ/ಗುಂ
4	ಪೂರ್ವ ತಾಲ್ಲೂಕು	0–35 ಗುಂಟೆ
5	ಆನೇಕಲ್ ತಾಲ್ಲೂಕು	ಅನ್ವಯಿಸುವುದಿಲ್ಲ.

ಬಾಲ ಕಾರ್ಮಿಕರ ನಿರ್ಬಂಧನ ಕುರಿತು ಕ್ರಮಗಳು:

1085 (1740); ಶ್ರೀ ಹ್ಯಾರಿಸ್ ಎನ್. ಎ. (ಶಾಂತಿನಗರ)

(ಅ) ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಬಾಲ ಕಾರ್ಮಿಕರನ್ನು ಗುರುತಿಸಿ ಸಂಬಂಧಪಟ್ಟವರ ಮೇಲೆ ಕಾನೂನು ಕ್ರಮಗಳನ್ನು ಜರುಗಿಸಿದ ಒಟ್ಟು ಪ್ರಕರಣಗಳೆಷ್ಟು?

ಆ) ವಿವಿಧ ಕಾರಣಗಳಿಗಾಗಿ ಉದ್ಯೋಗ ಅರಸಿ ಬರುತ್ತಿರುವ ಮಕ್ಕಳ ಸಂಖ್ಯಾ ಪ್ರಮಾಣದಲ್ಲಿ ಪರಿಶೀಲಿತಗಳ ವಿವರಗಳೇನು; ಉತ್ತರ ಕರ್ನಾಟಕ ಪ್ರದೇಶಗಳಿಂದ ಉದ್ಯೋಗಕ್ಕಾಗಿ ಬರುವ ಕೂಲಿ ಕಾರ್ಮಿಕರೊಂದಿಗೆ ಬರುವ ಮಕ್ಕಳಿಗೆ ಸರ್ಕಾರ ಒದಗಿಸಿಕೊಡುತ್ತಿರುವ ಸೌಲಭ್ಯಗಳು ಯಾವುವು;

ಇ) ಬಾಲ ಕಾರ್ಮಿಕರಿಗೆ ಪುನರ್ ವಸತಿ ಕಲ್ಪಿಸುವ ಮತ್ತು ಅವರಿಗೆ ಅರಿವು ಮೂಡಿಸುವ ಕೆಲಸ ಕಾರ್ಯಗಳಲ್ಲಿ ಸಹಕಾರ ನೀಡುತ್ತಿರುವ ಎನ್.ಜಿ.ಓ ಗಳ ಜಿಲ್ಲಾವಾರು ವಿವರ ನೀಡುವುದು; ಅವರಿಗೆ ಸರ್ಕಾರ ಒದಗಿಸಿ ಕೊಡುತ್ತಿರುವ ನೆರವು ಇತ್ಯಾದಿಗಳ ಮಾಹಿತಿ ನೀಡುವುದು?